ವಾತಾವರಣವೂ ಇಲ್ಲ. ನಮ್ಮಲ್ಲಿ ಪ್ರೇಕ್ಷಕರು ಮತ್ತು ರಂಗಭೂಮಿಯ ನಡುವೆ ಒಂದು ಅಂತರ ಇದೆ.

◆ **ಯಾಕೆ ಈ ಅಂತರ?**

ನಮ್ಮಲ್ಲಿ ಥಿಯೇಟರ್ ಬಹಳ ಚೆನ್ನಾಗಿದೆ. ರಾಜಕಾರಣ ಅಸಹ್ಯವಾಗಿದೆ. ಸುಮಾರು ಜನರು ಅನುದಾನಕ್ಕಾಗಿಯೇ ನಾಟಕ ಮಾಡುತ್ತಾರೆ. ಆದರೆ ಬೆರಳೆಣಿಕೆಯ ಜನರು ಮಾತ್ರ ರಂಗಭೂಮಿಗೆ ಆ ಅನುದಾನ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಬೆಂಗಳೂರಿನ ಚಾಳಿ. ಅಲ್ಲಿ ಒಬ್ಬೊಬ್ಬರು ನಾಲ್ಕು ನಾಲ್ಕು ತಂಡ ನೋಂದಣಿ ಮಾಡಿಕೊಂಡಿರುತ್ತಾರೆ. ಕೇಂದ್ರ ನಾಟಕ ಅಕಾಡೆಮಿಯಿಂದ ಹಣ ಪಡೆಯುವ 'ಗುತ್ತಿಗೆದಾರರು' ಇದ್ದಾರೆ. ಮತ್ತೊಂದು ವಿಪರ್ಯಾಸ ಅಂದರೆ ಇಂತಹ ಗುತ್ತಿಗೆದಾರರಲ್ಲಿ ರಂಗಭೂಮಿಯ ಪ್ರಮುಖರು ಎನಿಸಿಕೊಂಡವರೂ ಇದ್ದಾರೆ.

ರಂಗಮಂದಿರಗಳನ್ನು ಹೇಗೆ ಇಟ್ಟುಕೊಳ್ಳಬೇಕು ಎನ್ನುವ ಕನಿಷ್ಠ ಅರಿವು ಸಹ ಇಲ್ಲ. ಬೆಂಗಳೂರಿನ ರಂಗಶಂಕರವನ್ನು ಅವರು ರಂಗಭೂಮಿ ಚಟುವಟಿಕೆಗಳಿಗೆ ಮಾತ್ರ ಮೀಸಲಿಟ್ಟಿದ್ದಾರೆ. ರಂಗಶಂಕರದ ಜತೆ ನಾನಾ ಕಾರಣಕ್ಕೆ ಅಭಿಪ್ರಾಯ ಭೇದ ಇರಬಹುದು. ಅದು ಖಾಸಗಿ ಎನಿಸಬಹುದು. ಆದರೆ ಕನಿಷ್ಠ ಪಕ್ಷ ಅವರಂತೆ ನಿರ್ವಹಣೆಯನ್ನಾದರೂ ನಾವು ಕಲಿಯಬೇಕು ತಾನೇ? ರಾಜ್ಯದಲ್ಲಿರುವ ರಂಗಮಂದಿರಗಳಲ್ಲಿ ವುಡನ್ ಫ್ಲೋರ್ ಹಾಳಾಗಿದೆ. ಅದನ್ನು ಹೇಗೆ ಬಳಸಬೇಕು ಎನ್ನುವುದೇ ಗೊತ್ತಿಲ್ಲ. ಸರ್ಕಾರದ ಅಧಿಕಾರಿಗಳು, ನಿರ್ವಹಣಕಾರರು ಅದನ್ನು ಚೆನ್ನಾಗಿ ನೋಡಿಕೊಳ್ಳಬೇಕು. ತಂಡಗಳು ಕ್ರಿಯೇಟಿವ್ ಆಗಿದ್ದರೆ, ಆ ಒತ್ತಡದಿಂದಾದರೂ ರಂಗಮಂದಿರಗಳು ಚೆನ್ನಾಗಿರುತ್ತವೆ.

◆ **ನಟನೆಯ ತರಬೇತಿಗೆ ಡೀಪ್ ಫೋಕಸ್ ಶಾಲೆ ಆರಂಭಿಸುವ ಪ್ರಯತ್ನದಲ್ಲಿ ಇದ್ದೀರಿ. ಈಗಾಗಲೇ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ನಟನೆಯ ಬಗ್ಗೆ ತರಬೇತಿ ನೀಡಲು ಶಾಲೆಗಳು ಇವೆ. ಇಂತಹದ್ದರ ನಡುವೆ ಡೀಪ್ ಫೋಕಸ್ ಯಾವ ರೀತಿ ಭಿನ್ನ?**

'ಡೀಪ್ ಫೋಕಸ್'ನ ಪ್ರಾರಂಭದ ಕೆಲಸಗಳು ಆಗಿವೆ ಅಷ್ಟೇ. ಸಿನಿಮಾ ಬೃಹತ್ ಆಗಿ ಬೆಳೆದಿದೆ. ಆಕರ್ಷಣೆಯೂ ಇದೆ. ಸಿನಿಮಾ ಮತ್ತು ರಂಗಭೂಮಿಯ ನಟನೆಯನ್ನು ಕಲಿಸುವ ಮಧ್ಯಮಾರ್ಗದ ತರಬೇತಿಯನ್ನು ಇಲ್ಲಿ ನೀಡಲಾಗುವುದು. ರಂಗಭೂಮಿ, ಸಿನಿಮಾ ನಟನೆ ಎನ್ನುವ ಭಿನ್ನತೆ ಇಲ್ಲಿ ಇರುವುದಿಲ್ಲ. ಬರೀ ನಟನೆ ಅಷ್ಟೇ. ನಟನೆಯ ಮಾದರಿಗಳು ಬದಲಾವಣೆ ಆದಾಗ ಮಾತ್ರ ನಟನೆಯ ವಿಧಾನಗಳು ಬದಲಾಗುತ್ತವೆ.

ಯಾವ ಮಾಧ್ಯಮದ ಜತೆ ನಟಿಸುತ್ತೀರಿ ಎನ್ನುವಾಗ ನಟ ತನ್ನ ವ್ಯಾಕರಣ ಬದಲಾವಣೆ ಮಾಡಿಕೊಳ್ಳಬೇಕು. ಡೀಪ್ ಫೋಕಸ್ ನಟನೆಯನ್ನು ಸಿನಿಮಾ ಮತ್ತು ರಂಗಭೂಮಿಯ ಮಧ್ಯದ ಲಯಗಳಲ್ಲಿ ಹೇಳಿಕೊಡಲು ಪ್ರಯತ್ನಿಸುತ್ತದೆ.

◆ **ಮೊಘಲ್ ದೊರೆ ಔರಂಗಜೇಬನ ಕುರಿತು ನಾಟಕ ಪ್ರದರ್ಶಿಸುತ್ತಿದ್ದೀರಿ. ಈ ಬಗ್ಗೆ ಆಕ್ಷೇಪಗಳೇನಾದರೂ ಎದುರಾಗಿವೆಯೇ?**

ನನ್ನನ್ನು ಕಾಡಿದ ಪಠ್ಯಗಳನ್ನಷ್ಟೇ ರಂಗಕ್ಕಿಳಿಸುತ್ತೇನೆ. ಸುಮಾರು 60 ನಾಟಕಗಳನ್ನು ಮಾಡಿದ್ದೇನೆ. ಎಲ್ಲವೂ ವೈವಿಧ್ಯಮಯವಾಗಿವೆ. ಎಲ್ಲವೂ ವಿಭಿನ್ನ ಪಠ್ಯಗಳೇ. ಹಿಂದೂಗಳು ಔರಂಗಜೇಬ್ ದೇವಾಲಯಗಳನ್ನು ನಾಶ ಮಾಡಿದ, ಆತ ಮುಸಲ್ಮಾನ ಪಕ್ಷಪಾತಿ ಎನ್ನುತ್ತಾರೆ. ಮುಸಲ್ಮಾನರು ಆತ ನಮ್ಮ ಧರ್ಮದ ಪರವಾಗಿ ಕೆಲಸ ಮಾಡಿದ ನಿಜ, ಆದರೆ ಆತ ತನ್ನ ತಂದೆಗೆ ಕಿರುಕುಳ ಕೊಟ್ಟ ಇತ್ಯಾದಿ ಮಾತುಗಳನ್ನು ಹೇಳುತ್ತಾರೆ.

